ಪುನಸ್ಕಾರ ಮಾಡಿ ಮುಗಿಸಿ ಬಂದು ಪುನಃ ತಪಸ್ಸಿಗೆ ಕೂರುತ್ತಾರೆ' ಎಂದು ಅಲ್ಲಿದ್ದವರಿಗೆ ಹೇಳಿದರು. ಅದಕ್ಕೆ ರಾಚಯ್ಯ ಮೇಷ್ಟ್ರು 'ಏನ್ ಶಂಕರಪ್ಪ ಈ ಕಾಲದಾಗೂ ಅಂಥದ್ದನ್ನೆಲ್ಲಾ ನಂಬುವುದಕ್ಕೆ ಆಗುತ್ತಾ. ಅದು ಈ ಕಂಪ್ಯೂಟರ್ ಯುಗದಲ್ಲಿ' ಎಂದ. ಹೋಟೆಲ್ ಬನಶಂಕರಣ್ಣ ಒಂದು ಮಾರು ಎತ್ತರದಿಂದ ಟೀಯನ್ನು ಮಾಗೊಯ್ಯುತ್ತಾ 'ಮತ್ತೆ ಬಂಗಾರದ ಜಿಂಕೆಯನ್ನು ಯಾರು ಇಟ್ಟವರು ಅಲ್ಲಿ?' ಎಂದ. ಫ್ರೆಂಚ್ ಗಡ್ಡ ಜುಬ್ಬಾ ಮತ್ತು ಜೀನ್ಸ್ ಧರಿಸಿದ್ದ ಒಂದು ಅಪರಿಚಿತ ಧ್ವನಿಯೊಂದು 'ಇಲ್ಲ. ಇವೆಲ್ಲಾ ನಂಬಿಕೆಗಳಷ್ಟೇ. ಇದು ಮನುಷ್ಯರದೇ ಕೆಲಸ. ಇದನ್ನು ಯಾರೋ ಬಚ್ಚಿಟ್ಟಿರಬಹುದು. ಕ್ರಮೇಣ ಅಲ್ಲೊಂದು ಆಲದ ಮರ ಬೆಳೆದು ಕಾಲದಲ್ಲಿ ಮರೆಯಾಗಿತ್ತಷ್ಟೆ' ಎಂತು. ಹಸಿರು ಶಾಲನ್ನು ಹೊದ್ದು ಕೊಂಡಿದ್ದ ಮತ್ತೊಬ್ಬ ವ್ಯಕ್ತಿ, 'ಇದಕ್ಕೆಲ್ಲಾ ಈ ಜನ ಪೇಪರ್‌ನವರು ಯಾಕೆ ಇಷ್ಟೊಂದು ತಲೆಕೆಡಿಸಿಕೊಳ್ಳುತ್ತಾರೋ. ನಮ್ಮ ದೇಶದಲ್ಲಿ ಬೇಕಾದಷ್ಟಿವೆ ಸಮಸ್ಯೆಗಳು. ಅವುಗಳ ಕಡೆ ಗಮನ ಹರಿಸುವುದಕ್ಕೆ ಆಗುವುದಿಲ್ಲವೇ ಎಂದ. ಅದಕ್ಕೆ ಅದೇ ಊರಿನ ಗ್ರಾಮ ಪಂಚಾಯ್ತಿ ಸದಸ್ಯ ಪುಟ್ಟೇಶಪ್ಪ 'ತಲೆ ಯಾಕೆ ಕೆಡಿಸಿಕೊಳ್ಳಬೇಕು ಎಂದು ಹೇಳ್ತೀರಲ್ಲ ಮತ್ತೆ ನೀವ್ಯಾಕೆ ಬಂದದ್ದು. ಇದನ್ನು ನೋಡುವುದಕ್ಕೆ ಅಲ್ಲವೇ?. ಅಷ್ಟಕ್ಕೂ ಇದೇನು ಆರ್ಡಿನರಿ ಮ್ಯಾಟ್ರೆ? ಬಂಗಾರ ಮತ್ತು ವಜ್ರದ ಪ್ರಾಣಿ ಅಂದರೆ ಸುಮ್ಮನೇನಾ?', 'ನೀ ಹೇಳುವುದು ಸರಿ. ಆದರೆ ಇದನ್ನು ಮಾರಿ ಬರುವ ದುಡ್ಡಿಗೆ ನಿಮ್ಮ ಊರನ್ನು ಎಲ್ಲಾ ಸೌಕರ್ಯಗಳಿರುವ ಮಾದರಿ ಊರಾಗಿ ಮಾಡಬಹುದು. ಆದರೆ ಈ ಸರ್ಕಾರದ ಕೈಲಿ ಅದು ಆದಾತೆ. ಮೊದಲೇ ಈ ಮುಖ್ಯಮಂತ್ರಿಗಳು ದೇವರು ದಿಂಡ್ರು ಅಂಥಾ ತಿರುಗುತ್ತಾರೆ. ಇದುನ್ನೂ ಯಾವುದಾದರೂ ದೇವಸ್ಥಾನಕ್ಕೆ ದಾನಗೀನ ಕೊಟ್ಟರೂ ಕೊಟ್ರೆ' ಅಂದರು ಹಸಿರು ಶಾಲು ಹಾಕಿಕೊಂಡಿದ್ದ ವ್ಯಕ್ತಿ. ಅಲ್ಲೇ ಇದ್ದ ಮತ್ತೊಬ್ಬ ವ್ಯಕ್ತಿ ಟೀ ಕುಡಿಯುತ್ತಾ 'ನೀವು ಹೇಳುವುದು ನಿಜ' ಅಂದ. ಲೈನ್‌ಮ್ಯಾನ್ ಕೆಂಡಗಣ್ಣದಯ್ಯ ಅಲ್ಲಿದ್ದವರಿಗೆ 'ಅದು ಯಾವ ಪ್ರಾಣಿದಂತೆ. ಜಿಂಕೆದಲ್ಲ ಅಂತ ಹೇಳ್ತಾರೆ' ಎಂದ. ಅದಕ್ಕೆ ಮಹಾಲಿಂಗಪ್ಪ ಮೇಷ್ಟ್ರು 'ಯಾವ ಪ್ರಾಣಿದಾದರೆ ಏನಂತೆ. ಹಂದಿದಾದರೇನು? ನಾಯಿದಾದರೇನು? ಒಟ್ರಾಸಿ ಬಂಗಾರದ್ದು' ಎಂದ. ಇನ್ನೊಂದು ಧ್ವನಿ ಆ ಜನಗಳ ನಡುವಿಂದ 'ಮೇಷ್ಟ್ರೇ ವಜ್ರನೂ ಐತಂತಲ್ರಿ ಅದರಾಗೆ' ಅಂದ. ಅಲ್ಲದ್ದವರೆಲ್ಲಾ ಗೊಳ್ಳೆಂದು ನಕ್ಕರು. ಮತ್ತೊಂದು ಧ್ವನಿ 'ಜಿಂಕೆದೇ ಅಂತೀನಿ. ನಾನೇ ನೋಡಿದೀನಿ. ನನ್ನೀ ಎರಡು ಕಣ್ಣಾಗೆ ಈಗ್ಲೂ ಆ ಜಿಂಕೆ ಕುಣ್ದಂಗೆ ಕಾಣ್ತದೆ ಅಂತೀನಿ' ಎಂದಿತು.

* * *

ಮೀಡಿಯಾದವರು ಮತ್ತು ಪೊಲೀಸ್‌ನವರು ಪೆನ್ನೇಶಿ ಮತ್ತು ಪೆದ್ದೇಶಿಯವರ ಮನೆಯ ಹತ್ತಿರ ಜೀಪು, ಕಾರುಗಳನ್ನು ನಿಲ್ಲಿಸಿಕೊಂಡು ಬೀಡು ಬಿಟ್ಟದ್ದರು. ಒಂದು ಚಾನೆಲ್‌ನ ಒಬ್ಬ ವರದಿಗಾರ್ತಿ ಉದ್ದುದ್ದನೆಯ ಕೊಳವೆಯಂತಹ ಮೈಕ್ರೋಫೋನ್ ಅನ್ನು ಹಿಡಿದುಕೊಂಡು, 'ನೀವು ನೋಡ್ತಾ ಇದ್ದೀರಾ ಟೊಂಟಿಫೋರ್ ಇಂಟು ಸೆವೆನ್ ತಾಜಾ ನ್ಯೂಸ್ ನಾನು ಸುಷ್ಮಾ ಚಕ್ರವರ್ತಿ. ಅಪರೂಪದ ಬಂಗಾರದ ಪ್ರಾಣಿ ಸಿಕ್ಕ ಊರಿಂದ ನೇರವಾಗಿ ಮಾತಾಡ್ತಿದ್ದೀನಿ. ಇದು ಪೆನ್ನೇಶಿ ಮತ್ತು ಪೆದ್ದೇಶಿಯವರ ಮನೆ. ಅಲ್ಲಿ ಕೂತಿರುವವರು ಸುಮಾರು ಎಂಬತ್ತೊಂಬತ್ತು ವರ್ಷದ ಹನುಮ ಗಂಗಮ್ಮ. ಅವರ ತಾಯಿ. ವೀಕ್ಷಕರೇ, ಪೆನ್ನೇಶಿ ಮತ್ತು ಪೆದ್ದೇಶಿ ಪಕ್ಕದ ಊರಿಗೆ ಮರ ಕೊಯ್ಯಲು ಹೋಗಿದ್ದಾರೆ ಅವರು ಬರುವ ತನಕ ನಿಮಗೆ ಅವರ ಮನೆಯ ಚಿತ್ರಣವನ್ನು ಕೊಡುತ್ತೀನಿ' ಎಂದು, ಅವರ ಮನೆ, ಮನೆಯ ಮುಂದೆ ಜೋಡಿಸಿ ಇಟ್ಟಿರುವ ಮರದ ದಿನ್ನೆಗಳು, ಅವರ ತಾಯಿ ಹನುಮಗಂಗಮ್ಮ, ಮಳೆಗೆ ಸೋರಿ ಗುರುತುಗಳನ್ನು ಇನ್ನೂ ಹಾಗೆ ಇಟ್ಟುಕೊಂಡಿರುವ ಗೋಡೆಗಳನ್ನು ತೋರಿಸಿ ಒಂದೇ ಉಸಿರಿಗೆ ಮಾತಾಡಿದಳು. ಅಷ್ಟುಹೊತ್ತಿಗೆ ಅಲ್ಲಿದ್ದ ಕೆಲವರು 'ಅಗೋ ಗರಗಸ ಹಿಡಿದುಕೊಂಡು ಬರುತ್ತಿದ್ದಾರಲ್ಲ ಅವರೆ' ಎಂದು ಮಾತಾಡುವ ಸದ್ದು ಕೇಳಿಸಿತು. ಅವರು ಅವಳಿ ಸಹೋದರರಾಗಿದ್ದುದರಿಂದ ಒಬ್ಬರನ್ನು ಬಚ್ಚಿಟ್ಟು ಒಬ್ಬರನ್ನು ತರಬಹುದಿತ್ತು. ಅಷ್ಟರಮಟ್ಟಿಗೆ ಅವರಿಬ್ಬರಿಗೆ ಹೋಲಿಕೆ ಇತ್ತು. ಇಬ್ಬರೂ ಒಂದೇ ಎತ್ತರ. ಒಂದೇ ಬಣ್ಣ. ಇಬ್ಬರೂ ತಮ್ಮ ಎಡಕಿವಿಗಳಿಗೆ ಬೆಳ್ಳಿಯ ರಿಂಗ್ ಹಾಕಿಕೊಂಡಿದ್ದರು. ಸವೆದಿರುವ ಹವಾಯಿ ಚಪ್ಪಲಿ ಹಾಕಿಕೊಂಡಿದ್ದರು. ಆದರೆ